**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1416 |
| 2 | ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 18-12-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳು ಯಾವುವು; ಇದಕ್ಕೆ ಖರ್ಚು ಮಾಡಲಾಗಿರುವ ಮೊತ್ತ ಎಷ್ಟು; (ವಿವರ ನೀಡುವುದು) | ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗುತ್ತಿಗೆದಾರರಿಗೆ ಪಾವತಿಸಲು ಬಾಕಿ ಇರುವ ಮೊತ್ತವೆಷ್ಟು; (ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗುತ್ತಿಗೆದಾರರಿಗೆ ಪಾವತಿಸಲು ಬಾಕಿ ಇರುವ ಮೊತ್ತದ ವಿವರಗಳು (ದಿನಾಂಕ:16-12-2025 ರವರೆಗೆ) ಈ ಕೆಳಕಂಡಂತಿದೆ: |
| ಇ | ಬೆಂಗಳೂರಿನ ಹಲವು ರಸ್ತೆಗಳು ಗುಂಡಿ ಬಿದ್ದು ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಈ | ಯಾವ ಕಾಲ ಮಿತಿಯಲ್ಲಿ ರಸ್ತೆಗಳ ಗುಂಡಿಗಳನ್ನು ದುರಸ್ತಿಗೊಳಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು? | ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |

| Category | Bills | Amount (in Crs) |
|---|---|---|
| BBMP | 5536 | 2623.19 |
| GOK | 888 | 1390.62 |
| GOI | 125 | 67.25 |
| **Total** | **6549** | **4081.06** |

**ನಅಇ 595 ಎಂಎನ್‌ವೈ 2025 (ಇ)**

**(ಡಿ ಕೆ ಶಿವಕುಮಾರ್)**
ಉಪ ಮುಖ್ಯಮಂತ್ರಿ

# ಅನುಬಂಧ

- ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 11196.74 ಕಿ.ಮೀ. ವಾರ್ಡ್ ರಸ್ತೆಗಳು ಮತ್ತು 1682.10 ಕಿ.ಮೀ ಪ್ರಮುಖ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳು ಒಟ್ಟಾರೆ 12878.84 ಕಿ.ಮೀ. ಉದ್ದ ಇರುತ್ತದೆ.
- DLP ಅವಧಿಯಲ್ಲಿರುವ ರಸ್ತೆಗಳಲ್ಲಿ ಉದ್ಭವವಾಗಿರುವ ರಸ್ತೆಗುಂಡಿಗಳನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದಲೇ ಮುಚ್ಚಲು ಕ್ರಮವಹಿಸಲಾಗಿರುತ್ತದೆ.
- 2025–26ನೇ ಸಾಲಿನ ಹಿಂದಿನ ಬಿಬಿಎಂಪಿ ಆಯವ್ಯಯದಲ್ಲಿ ಆರ್ಟೀರಿಯಲ್ ಮತ್ತು ಸಬ್–ಆರ್ಟೀರಿಯಲ್ ರಸ್ತೆಗಳಿಗೆ ರೂ.18.00 ಕೋಟಿ ಅನುದಾನವನ್ನು ನೀಡಲಾಗಿದ್ದು, ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮವಹಿಸಲಾಗಿರುತ್ತದೆ.
- 2025–26ನೇ ಸಾಲಿನ ಹಿಂದಿನ ಬಿಬಿಎಂಪಿ ಆಯವ್ಯಯದಲ್ಲಿ ವಾರ್ಡ್ ರಸ್ತೆಗಳಿಗೆ ರೂ.45.00 ಕೋಟಿಗಳ ಅನುದಾನವನ್ನು ನೀಡಲಾಗಿದ್ದು, ಸದರಿ ಅನುದಾನದಲ್ಲಿ ವಾರ್ಡ್ ರಸ್ತೆಗಳ ಗುಂಡಿಗಳನ್ನು ಮುಚ್ಚಲು ವಿಭಾಗವಾರು ಗುತ್ತಿಗೆದಾರರುಗಳನ್ನು ನೇಮಿಸಿ ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮವಹಿಸಲಾಗಿರುತ್ತದೆ.
- ಪ್ರಸ್ತುತ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಬಾಗಲೂರಿನಲ್ಲಿ ಸ್ವಂತ ಡಾಂಬರು ಮಿಶ್ರಣ ಘಟಕವನ್ನು ಹೊಂದಿದ್ದು, ಸದರಿ ಘಟಕದ ನಿರ್ವಹಣೆ, ಕಾರ್ಯಾಚರಣೆ ಮತ್ತು ಡಾಂಬರೀಕರಣ ಮಾಡಲು ಹಿಂದಿನ ಬಿಬಿಎಂಪಿಯ ಅವಧಿಯಲ್ಲಿಯೇ ಗುತ್ತಿಗೆದಾರರನ್ನು ನೇಮಿಸಲಾಗಿರುತ್ತದೆ. ಬಿಬಿಎಂಪಿ ನಿರಸನಗೊಂಡ ನಂತರ ಎಲ್ಲಾ ನಗರ ಪಾಲಿಕೆಗಳಿಗೂ ತುರ್ತು ಕಾಮಗಾರಿಗಳ ಸಲುವಾಗಿ ರೂ.25.00 ಕೋಟಿಗಳ ಹಣವನ್ನು ಬಿಡುಗಡೆ ಮಾಡಿ, ಸದರಿ ಮೊತ್ತದಲ್ಲಿ ಭರಿಸಿಕೊಂಡು ರಸ್ತೆ ಗುಂಡಿಗಳನ್ನು ಮುಚ್ಚಲು ಪಾಲಿಕೆಗಳಿಂದ ಕ್ರಮವಹಿಸಲಾಗಿರುತ್ತದೆ.
- ಅಲ್ಲದೇ, ಲಭ್ಯವಿದ್ದ Cold Asphalt ಹಾಗೂ Ecofix Asphalt ಅನ್ನು ಸಹ ಬಳಸಿ ತೇವಾಂಶವುಳ್ಳ ರಸ್ತೆಗಳಲ್ಲಿದ್ದ ಗುಂಡಿಗಳನ್ನು ಮುಚ್ಚಲು ಕ್ರಮವಹಿಸಲಾಗಿರುತ್ತದೆ.
- 2024–25ನೇ ಸಾಲಿನ ರಾಜ್ಯ ಸರ್ಕಾರದ ರೂ.800.00 ಕೋಟಿ ಅನುದಾನ ಮತ್ತು ಹಿಂದಿನ ಬಿಬಿಎಂಪಿ ಎಸ್ಕ್ರೋ ಅನುದಾನ ರೂ.900.00 ಕೋಟಿ ಸೇರಿದಂತೆ ಒಟ್ಟು ರೂ.1700.00 ಕೋಟಿ ಅನುದಾನದಡಿಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೈಗೊಂಡು, ದೀರ್ಘಕಾಲಿಕ ಬಾಳಿಕೆಯುಳ್ಳ ರಸ್ತೆ / ಗುಂಡಿಮುಕ್ತ ರಸ್ತೆಗಳನ್ನಾಗಿ ಪರಿವರ್ತಿಸಲಾಗುತ್ತಿದೆ.

- ಸರ್ಕಾರದ ಆದೇಶ ಸಂಖ್ಯೆ: ನಅಇ 316 ಎಂಎನ್‌ವೈ 2023 (ಇ), ದಿನಾಂಕ: 12-09-2023 ರಲ್ಲಿ "Construction of Elevated Corridor by Integrating Ejipura Main Inner Ring Road Junction, Sony World Junction and Kendriya Sadana Junction, along 100Ft Inner Ring Road, Kormangala, Bengaluru Balance Portion (As is where is basis)"-2nd Call (Turnkey) Overall 4th call ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತವಾದ ರೂ.307.96 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ: ನಅಇ 100 ಎಂಎನ್‌ವೈ 2024, ದಿನಾಂಕ:07-03-2024ರ ಆದೇಶದಲ್ಲಿ ಪಾಲಿಕೆಯ ವಿವಿಧ ವಿಧಾನ ಸಭಾ ಕ್ಷೇತ್ರಗಳಿಗೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ತಲಾ ರೂ.25.00 ಕೋಟಿಗಳ ಅನುಮೋದನೆ ನೀಡಲಾಗಿರುತ್ತದೆ.

- 2024-25ನೇ ಸಾಲಿನ ಬಿಬಿಎಂಪಿ ಎಸ್ಕ್ರೋ ಅನುದಾನದಡಿಯಲ್ಲಿ ರೂ.694.00 ಕೋಟಿಗಳ ಮೊತ್ತದಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಪ್ರಗತಿಯಲ್ಲಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ: ನಅಇ 475 ಎಂಎನ್‌ವೈ 2025, ದಿನಾಂಕ: 14-11-2025ರ ಆದೇಶದಲ್ಲಿ ರೂ.1241.57 ಕೋಟಿಗಳ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.

- ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ 05 ಬೆಂಗಳೂರು ನಗರ ಪಾಲಿಕೆಗಳ ವ್ಯಾಪ್ತಿಯ ವಾರ್ಡ್ ಅಭಿವೃದ್ಧಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ರೂ.1000.00 ಕೋಟಿಗಳ ಮೊತ್ತದ ಕ್ರಿಯಾಯೋಜನೆಗೆ ದಿನಾಂಕ:03.11.2025 ರಂದು ಅನುಮೋದನೆ ನೀಡಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.